145(4)

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 116 | ಸೋಮವಾರ 31—12—45 | ಬಿಡಿ ಪ್ರತಿ 6 ಪೈ

ಮರಣಾಂತರ ಉಪವಾಸ

ಬೆಳಗಾಂವಿ ಜಿಲ್ಲೆಯ ಆರು ಸ್ಥಳಗಳಲ್ಲಿ ಒಂದಕ್ಕೆ ಶ್ರೀ ಲಠ್ಠೆಯವರನ್ನು ಬರುವ ಪ್ರಾಂತಿಕ ಚುನಾವಣೆಯಲ್ಲಿ ಕಾಂಗ್ರೆಸ್ ಹರಿಯಾಳಾಗಿ ಮಾಡುವ ಪ್ರಯತ್ನವನ್ನು ಕೆಲ ಕಾರ್ಯಕರ್ತರು ನಡೆಸಿದ್ದಾರೆಂದು ತಿಳಿಯುತ್ತದೆ. ಈ ಕುತಂತ್ರವು ಯಶಸ್ವಿಯಾಗಿ ಶ್ರೀ ಲಠ್ಠೆಯವರಿಗೆ ಒಂದು ಸ್ಥಾನ ಸಿಕ್ಕಲ್ಲಿ ಬೆಳಗಾವಿಯಲ್ಲಿಯ ki ತರುಣರು ಪ್ರಾಣಾಂತಿಕ ಉಪವಾಸವನ್ನು ಪ್ರಾರಂಭಿಸುವರೆಂದು ತಿಳಿದುಬಂದಿದೆ.

ಪರ್ಷ್ಯ

ಪರ್ಷ್ಯಾ ಸರ್ಕಾರದ ಲೆಕ್ಕದ ಪ್ರಕಾರ ಅಜರ್ಬೈಜಾನ್‌ನ ಜನ ಸಂಖ್ಯೆ ಒಂದು ಮಿಲಿಯ. ಸಕ್ಕರೆ ರೇಷನ್‌ಗೆ ಸಾಲ್ಕು ಮಿಲಿಯ ಜನರೆಂದು ತಿಳಿದುಬಂದಿರುವುದು.

ಒಟ್ಟು ಜನಸಂಖ್ಯೆ 12 ಮಿಲಿಯವೆಂದೆಂದುಕೊಂಡಲ್ಲಿ ಅವಂಲ್ಲಿ 10 ಮಿಲಿಯ ಮಂದಿ ಪೂರ್ಣೋಪವಾಸಿಗಳು ಪವಾಸಿಗಳು ಅಥವಾ ಅರ್ಧೋಪವಾಸಿಗಳು. ಹಾಗೂ ವಿದ್ಯಾವಿಹೀನರಾದ ಪಶುಗಳಂತಿರುವವರು. ಆ ದೇಶದಲ್ಲಿ ಹುಟ್ಟುವ ಮಕ್ಕಳಲ್ಲಿ ಶೇ 75 ರಷ್ಟು ಒಂದು ವರ್ಷ ವಯಸ್ಸಿನ ಒಳಗೇ ಮೃತವಾಗುತ್ತವೆ. ಪರ್ಷ್ಯದ ಸರ್ಕಾರವನ್ನು ನಡೆಸುವವರು 2000 ಮಂದಿ ಹಣವಂತರು. ಮುಂದಿನ ಮಾರ್ಚ್ ತಿಂಗಳ ಒಳಗೆ ಟೆಹರಾನಿನಲ್ಲಿ ಸೋವಿಯೆಟ್ ರಿಗೆ ಅನುಕೂಲವಾದ ಸರ್ಕಾರವು ಸ್ಥಾಪಿತವಾಗಲಿಕ್ಕಿದೆ.

ಉಪಹಾರ ಕೂಟ

ಮೈಸೂರು ಪೌರಸಭೆಯ ಉಪಾಧ್ಯಕ್ಷರಾದ ಶ್ರೀ ವೆಂಕಟರಮಣಯ್ಯನವರು ನಾಳೆ ದಿವಸ ಸಂಜೆ ೪ ಘಂಟೆಗೆ ಪೌರಸಭೆಯ ಕಟ್ಟಡದಲ್ಲಿ ಉಪಹಾರಕೂಟವನ್ನೇರ್ಪಡಿಸಿರುವರು.

ಭಾರೀ ಜುಲ್ಮಾನೆ

ಭಾರತ ರಕ್ಷಣಾ ಕಾನೂನು ರೀತ್ಯಾ ಹತ್ತಿ ನಿಯಂತ್ರಣ ಕಾನೂನಿನ ನಿರೋಧ ಮುಂತಾದ ಐದು ತಕ್ಸೀರುಗಳಿಗಾಗಿ ಸೇಲಂ ಶಿವಪೇಟೆಯ ಕೃಷ್ಣಸ್ವಾಮಿಶೆಟ್ಟಿ ಎಂಬವನಿಗೆ ರೂ. 40000 ಜುಲ್ಮಾನೆ ವಿಧಿಸಲಾಗಿದೆ

ಬ್ರೆಡ್ ರೇಷನ್

ಪ್ಯಾರಿಸ್ಸಿನಲ್ಲಿಯ ಅಧಿಕಾರಿಯುತವಾದ ಪ್ರಕಟಣೆಯೊಂದರಂತೆ ನಾಳೆಯಿಂದ ಫ್ರಾನ್ಸಿನಲ್ಲಿ ಬ್ರೆಡ್ ರೇಷನ್ ಜಾರಿಗೆ ಬರುವುದು.

SATYAVADI

— Wishes —

A HAPPY & PROSPEROUS

NEW YEAR

To All Its Patrons Subscribers Advertisers Readers & Wellwishers

ಬಟ್ಟೆಯಿಲ್ಲ ? ಗಾಂಧೀಜಿ ದರ್ಶನವಿಲ್ಲ !

ಇದೊಂದು ಹೃದಯವಿದ್ರಾವಕ ಘಟನೆ. ಬಾಲಕನೊಬ್ಬ ತನ್ನ ಹಸುಳತನದ ಸ್ವಚ್ಛೆ ನೇತ್ರಗಳಿಂದ ಗಾಂಧೀ ದರ್ಶನ ಮಾಡಿ ಮಾಡಿ, ಪುನೀತನಾದೆನೆಂಬ ಸಂತೃಪ್ತಿಯಿಂದ ಮನೆಯ ಕಡೆ ಹೊರಟ. ದೂರದ ಹಳ್ಳಿಯಿಂದ ಗಾಂಧೀ ದರ್ಶನಕ್ಕಾಗಿಯೇ ಬಂದಿದ್ದ. ಮನೆಗೆ ಹಿಂದಿರುವಾಗ ಗಾಂಧೀಜೀ ತುಳಿದ ಮಣ್ಣನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಕಟ್ಟಿಕೊಂಡು ಹೊರಟ. ಇದನ್ನು ಕಂಡು ಚಿಕಿತರಾದವರೊಬ್ಬರು ಇದೇನೆಂದು ಬಾಲಕನನ್ನು ಕೇಳಿದರು ಬಾಲಕ ಹೇಳಿದ—' ಮನೆಯಲ್ಲಿ ನನ್ನ ತಾಯಿ ಮತ್ತು ನನ್ನ ಸಹೋದರಿ ತಮ್ಮ ಬಹು ದಿನಗಳ ಬಯಕೆಯಾದ ಗಾಂಧೀ ದರ್ಶನವನ್ನು ಈಡೇರಿಸಿಕೊಳ್ಳಲಾರದೆ ಹತಾಶರಾಗಿದ್ದಾರೆ. ಇಲ್ಲಿಗೆ ಬಂದು ಗಾಂಧೀಜಿ ದರ್ಶನ ಮಾಡಿ ಹೋಗಲು ಅವರ ಮೈಮೇಲೆ ಒಟ್ಟೆಯಿಲ್ಲ ಒಂದು ತುಂಡು ಬಟ್ಟೆಯು ಹೊರತು ಅವರ ಮೈಮೇಲೆ ಮತ್ತೇನೂ ಇಲ್ಲ. ಆದ್ದರಿಂದ ಅವರು ಮನೆಯಿಂದ ಹೊರಬರುವಂತಿಲ್ಲ ಆದಕ್ಕಾಗಿ ನೀನಾದರೂ ಗಾಂಧೀಜೀಯವರ ದರ್ಶನ ಮಾಡಿಬಂದು ಪುಣ್ಯಶಾಲಿಯಾಗು ನಮಗೆ ಅವರ ಸ್ವರೂಪವನು ವರ್ಣಿಸಿಹೇಳು ಆದರೆ ಅವರು ತುಳಿದ ಮಣ್ಣನ್ನಾದರೂ ನಮಗೆ ಕಟ್ಟಿಕೊಂಡು ಬಾ ಎಂದರು ' ನಮ್ಮ ತಾಯಿ ಎಂಬುದಾಗಿ ಹೇಳಿದ. (ಪೌ)

ಹಿಟ್ಲರಿನ ಉಯಿಲು

ನ್ಯೂರೆಂಬರ್ಗ್ ಡಿ 29 — ಒಂದು ಹಳ್ಳಿಯ ಮನೆಯಲ್ಲಿ ಹಿಟ್ಲರಿನ 4 ಭಾಗಗಳನ್ನೊಳಗೊಂಡ ಒಂದು ಉಯಿಲು ದೊರೆತಿರುವುದೆಂದು 3 ನೇ ಅಮೇರಿಕಾ ಸೈನ್ಯಾಧಿಕಾರಿಯು ಪ್ರಕಟಿಸಿರುವನು. ಅದು 1945 ನೇ ಏಪ್ರಿಲ್ 29 ನೇ ತಾರೀಖಿನದ್ದು, ಅದರಲ್ಲಿ ಅವನ ರಾಜಕೀಯ, ಸ್ವಂತ ಆಸ್ತಿಪಾಸ್ತಿ, ಮತ್ತು ವಿವಾಹ ಸಂಬಂಧ ವಿಷಯಗಳಿವೆಯೆಂದು ಪ್ರಕಟನವಾಗಿದೆ.

ಬೊಂಬಾಯಿನಲ್ಲಿ ಹರತಾಳ

ಬೊಂಬಾಯಿ ಡಿ 29— ಪೂನಾದ ಹತ್ತಿರ ಶ್ರೀ ಶಿವಾಜಿ ಜನ್ಮಸ್ಥಳವಾದ ಶಿವನೇರಿ ಕೋಟೆಯಲ್ಲಿದ್ದ ಒಂದು ವಿಗ್ರಹವನ್ನು ಒಡೆದುಹಾಕಿರುವರೆಂಬ ವರ್ತಮಾನ ಕೇಳಿ, ಇಲ್ಲಿಯ ಎಲ್ಲಾ ಪ್ರಮುಖ ಹಣ್ಣು, ಹೂವು, ಕಾಯಿಪಲ್ಲ ಮಾರ್ಕಟ್ಟುಗಳೂ, ಅಂಗಡಿಗಳೂ ಮುಚ್ಚಲ್ಪಟ್ಟಿದ್ದವು.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ — ಧನ ಲಾಭವುಂಟು ಆದರೆ ವ್ಯವಹಾರದಲ್ಲಿ ಕಷ್ಟ ನಿಷ್ಠೂರಗಳ ಭಯವಿದೆ ಜಾಗ್ರತೆ.

ವೃಷಭ — ಆರೋಗ್ಯ ಭಾಗ್ಯವುಂಟು. ಸಾಂಪತ್ತಿಕ ಸ್ಥಿತಿಯುತ್ತಮವಿರುತ್ತದೆ. ಖರ್ಚು ಹೆಚ್ಚಾಗುವುದು.

ಮಿಥುನ — ಆರೋಗ್ಯವು ಚನ್ನಾಗಿರುತ್ತದೆ. ಆದಾಯವೂ ಖರ್ಚು ಸಮನಾಗಿರುತ್ತವೆ.

ಕರ್ಕಾಟಕ — ಶಾರೀರಕ ಸ್ಥಿತಿ ಚನ್ನಾಗಿರುತ್ತದೆ. ಮನೋಸ್ಥಿತಿ ಅಲ್ಲೋಲಕಲ್ಲೋಲವಾಗಿರುತ್ತದೆ. ವ್ಯವಹಾರದಲ್ಲಿ ಕಷ್ಟದ ಅನುಭವ.

ಕನ್ಯ — ಆರ್ಥಿಕ ಆರೋಗ್ಯ ಲಾಭಗಳುಂಟು. ಮಿತ್ರರ ಭೇಟಿ ಲಭಿಸಬಹುದು.

ಸಿಂಹ — ವ್ಯವಹಾರದಲ್ಲಿ ತೊಂದರೆ. ಧನಹಾನಿ.

ತುಲಾ — ವ್ಯವಹಾರದಲ್ಲಿ ಲಾಭ ಪ್ರಾಪ್ತಿ. ಆರೋಗ್ಯವು ಉತ್ತಮವಿರುತ್ತದೆ. ಎಲ್ಲಾ ಕಷ್ಟಗಳಿಂದ ಪಾರಾಗುವಿರಿ.

ವೃಶ್ಚಿಕ — ಶಾರೀರಕ ಸಾಂಪತ್ತಿಕ ಮಾನಸಿಕ ವ್ಯವಹಾರಿಕ ಮೊದಲಾದ ಎಲ್ಲಾ ಸ್ಥಿತಿಗಳೂ ಉತ್ತಮವಾಗಿರುತ್ತವೆ.

ಧನಸ್ಸು — ಆರೋಗ್ಯಕ್ಕೆ ಧಕ್ಕೆ ಬರುವುದು. ಆರ್ಥಿಕ ಮುಗ್ಗಟ್ಟು ಉಂಟಾಗಬಹುದು. ಮನಸ್ಸು ಯೋಚನೆಗಳಲ್ಲಿ ತುಂಬಿರಬಹುದು. ವ್ಯವಹಾರದಲ್ಲಿ ಮಾಶ್ರ ಜಯ ಯಶಸ್ಸುಗಳು

ಮಕರ — ಎಲ್ಲಾ ಬಗೆಗಳಲ್ಲೂ ಕಷ್ಟವಿರುತ್ತದಾಗಲಿ ಸುಖವಿಲ್ಲ.

ಕುಂಭ — ಸಜ್ಜನ ಸಹವಾಸವು ಲಭಿಸುತ್ತದೆ. ವ್ಯವಹಾರದಲ್ಲಿ ವಿಜಯಪ್ರಾಪ್ತಿ. ಆರೋಗ್ಯ ಲಾಭವು ಉಂಟು.

ಮೀನ — ಶಾರೀರಕ ಆರ್ಥಿಕ ವ್ಯವಹಾರಿಕ ಸ್ಥಿತಿಗಳು ಉತ್ತಮವಾಗಿರುವುದರಿಂದ ಮನೋಲ್ಲಾಸದಿಂದ ಆಚರಿಸಿರುವಿರಿ.

ಪಂಡಿತ ಜವಹರರು ಅಲಹಾಬಾದಿಗೆ ಬರಲು ಸಂಜಾಬು ಮೈಲಿನಲ್ಲಿ ಪ್ರಯಾಣ ಮಾಡಿದರು. ಮೊಗಲ್‌ಸೇಸಲ್ಲಿ ಟೋಫ್ ಎಕ್ಸ್‌ಪ್ರೆಸ್ ಗಾಡಿಯನ್ನು ಪಂಡಿತರ ಸೌಕರ್ಯಕ್ಕಾಗಿಯೇ ಪಂಜಾಬು ಮೈಲು ಬರುವವರೆಗೂ ನಿಲ್ಲಿಸಿದ್ದರು. ಮೊಗಲ್‌ಸೆನಲ್ಲಿ ಜವಾಹರರಿಗೆ ಪ್ರಜೆಗಳು ನಿಧಿ ಅರ್ಪಿಸಿದರು.

ಕಳೆದವಾರ

ಫಿಲಿಡೆಲ್ಫಿಯಾದಲ್ಲಿ ಕ್ರಿಸ್ ಮಸ್ ಹಿಂದಿನ ದಿನ ಒಂದು ಹುಡುಗಿಯು ಸಾಯುವಾಗ ತನ್ನ ತಾಯಿಯು ಕೈಲಿ ತನ್ನ ತಂದೆಯೂ ಬಂದರೆ ತಾನು ಸಾಯುವ ವಿಷಯದಲ್ಲಿ ತನಗೆ ವ್ಯಸನವಿಲ್ಲನೆಂದಳಿಂದೂ ಹುಡುಗಿ ಸತ್ತ ಮೂರು ಘಂಟೆಗಳಲ್ಲಿ ತಂದೆಯೂ ಹೃದಯ ಸ್ತಂಭನದಿಂದ ಸತ್ತನೆಂದೂ ತಿಳಿಯಬಂದಿದೆ.

ಂ ಂ

ಮದರಾಸು ಡಿ 22— ಸಂಗೀತ ವಿದ್ಯಾಲಯದವರು ಏರ್ಪಡಿಸಿರುವ 19 ನೇ ಸಂಗೀತ ಸಮ್ಮೇಳನದಲ್ಲಿ ಸಂಗೀತ ವಿದ್ವಾನ್ ವಿ ಹಾರಾಜಪುರಂ ವಿಶ್ವನಾಥ ಅಯ್ಯರವರು, ತಮ್ಮ ಅಧ್ಯಕ್ಷ ಭಾಷಣದಲ್ಲಿ ಕರ್ನಾಟಕಸಂಗೀತವೇ ಪ್ರಪಂಚದಲ್ಲಿನ ಎಲ್ಲಾ ವಿಧದ ಸಂಗೀತದಲ್ಲೂ ಶ್ರೇಷ್ಠವಾದುದೆಂದಿರುವರು.

ಂ ಂ

ಮೆಲ್ಬೋರ್ನ್. ಡಿ 23 — ಆಸ್ಟ್ರೇಲಿಯಾ ಸೈನ್ಯಗಳು ಟೋಕಿಯೋಗೆ ನಾನೂರು ಮೈಲಿ ದಕ್ಷಿಣದಲ್ಲಿರುವ ಕುರೋಭಾಗವನ್ನು ಮಾರ್ಚಿಯಲ್ಲಿ ಆಕ್ರಮಿಸುವರೆಂದು ಹೇಳಲಾಗಿದೆ.

ಂ ಂ

ಹತ್ತು ವರ್ಷ ವಯಸ್ಸಿನ ಹುಡುಗನು ಬರೆದಿದ್ದ ಜಿನ್ನಾರವರ ಫೋಟೋವು ಜಿನ್ನಾರವರಿಗೆ ಕೊಡಲ್ಪಟ್ಟು ಆಗ ಹರಾಜು ಮಾಡಲಾಗಿ ಮೂರು ಸಾವಿರ ರೂ ದೊರಯಿತು. ಕೊಂಡುಕೊಂಡವನು ಜಿನ್ನಾರವರಿಗೆ ಆ ಫೋಟೋ ವಾಪಸು ಕೊಟ್ಟಬಿಟ್ಟನು.

ಂ ಂ

ಡಾ || ಪೆರಿಯರ್ (ಜಾನ ಸ್ಥಾನ ಮಂತ್ರಿ) ರವರು ತಮ್ಮನ್ನು ಗುಂಡಿಕ್ಕಿ ಸಾಯಿಸಲು ಪ್ರಯತ್ನಿಸಿದವರು ಡಚ್ ಅಧಿಕಾರಿಗಳಿಂದ ಪ್ರೇರಿತರಾದವರು ಎಂದಿರುವರು.

ಂ ಂ

ಕಲ್ಕತ್ತಾ, ಡಿ 22 — ಶ್ರೀ ಸುಭಾಷರು ಮಾತ್ರ ಅಡ್ಡ ಬರದಿದ್ದರೆ ಜಪಾನರು ಭಾರತೇಯರನ್ನು ಸಾಮೂಹಿಕವಾಗಿ ಕೊಲ್ಲುತ್ತಿದ್ದರೆಂದು ಮಲೆಯಾದಿಂದ ಬಂದವರು ತಿಳಿಸುತ್ತಾರೆ.

ಂ ಂ

ಕರಾಚಿ, ಡಿ 26 — ಪ್ಯಾರಿಸ್ಸಿನಲ್ಲಿ ನಡೆದ ಪರಿಪಾಠ ಸಮ್ಮೇಳನದಲ್ಲಿ ಭಾರತವೂ ತಕ್ಕಷ್ಟು ಪಡೆಯಲು ಯತ್ನಿಸಲಾಗಿದೆಯೆಂದು ಶ್ರೀ ಬಿ. ಎನ್. ನೆಹರೂರವರು ಹೇಳಿರುವರು.

ಂ ಂ

ಇಂಡುನೇಷಿಯಾ ಪ್ರಜಾಸ್ವಭುತ್ವ ಸರ್ಕಾರವು ತನ್ನದೆ ಸ್ವಾಂಪುಗಳನ್ನು ಮುದ್ರಿಸಿದೆ.

ಮತ್ತೊಂದು ಯುದ್ಧ ತಯಾರಿ ?

ಜಪಾನಿಗಳ ವಶದಲ್ಲಿರುವ ಶಿಕೊಕು ನಡುಗಡ್ಡೆಯಲ್ಲಿ ಅಮೇರಿಕಾದ 6 ನೇ ಸೈನ್ಯದಳವು ಎಷ್ಟೋ ವಿಮಾನದ ಭಾಗಗಳು, ಕ್ಯಾಟಿಡ್ ಗಿಲ್ಡರ್ಸ್ ಮತ್ತು ನೆಲದಲ್ಲಿ ಹೂತಿಟ್ಟ ಕಟ್ಟಿಗೆ ಮತ್ತು 40 ಸಾವಿರ ಗ್ಯಾಲನ್ ಪೆಟ್ರೋಲನ್ನು ಪತ್ತೇಮಾಡಿದ್ದಾರೆ ಈ ಸ್ಥಳವು ಮುಖ್ಯ ಸ್ಥಾನಿಕ ಪೋಲೀಸ್ ಕ್ವಾರ್ಟರಿನಿಂದ ಒಂದೇ ಮೈಲಿ ಇದ್ದು ಎಲ್ಲಾ ಯುದ್ಧ ಸಾಮಗ್ರಿಗಳೂ ಶರಣಾಗತಿಯ ಕಾಲಕ್ಕೆ ಒಪ್ಪಿಸಲ್ಪಟ್ಟಿರುವುದೆಂದು ಜ || ವೆ.ಕ್ ಅರ್ಥರಿಗೆ ಹೇಳಲಾಗಿತ್ತು. ಇದಲ್ಲದೆ ಶಿಕೋಕುದ ಕರಾವಳಿಯ ಹತ್ತಿರ ಕಾಂಕೀಟು ಪೆಟ್ಟಿಗೆಗಳು ಸಿಕ್ಕಿರುವವು- ಇವು ಅತಿ ಕೌಶಲ್ಯದಿಂದ ಮುಚ್ಚಿಡಲಾಗಿದ್ದವು. ಒಂದು ಶಾಲೆಯ ಕಟ್ಟಡದಲ್ಲಿ ಹುಲ್ಲಿನ ಕಂತೆಗಳ ಕೆಳಗೆ ಮಿಲಿಟರಿ ಸಾಮಗ್ರಿಗಳು ಸಿಕ್ಕಿರುತ್ತವಂತೆ. ಹೀಗೆ ಮುಚ್ಚಿಡಲ್ಪಟ್ಟಿರುವ ಯುದ್ಧ ಸಾಮಗ್ರಿಗಳು ಸಿಕ್ಕುತ್ತಲೇ ಇವೆಯಂತೆ.

ಹೊಸನು ನಡುಗಡ್ಡೆಯಲ್ಲಿ ಒಂದು ದೇವಾಲಯದ ಸುತ್ತಲೂ ಬಿದುರಿನ ಕಂಭಗಳನ್ನು ಕೂಡಿಸಿದ್ದರ ಸಂಶಯದಿಂದ ಒಬ್ಬ ಅಮೆರಿಕನ್ ಆಫೀಸರನು ಹೋಗಿ ನೋಡಲಾಗಿ ಒಳಗೆ ಎಷ್ಟೋ ಫೈಟರ್ ಏರ್‌ಕ್ರಾಫ್ಟು ಎಂಜಿನ್ನುಗಳು ಕಾಣಿಸಿದವಂತೆ, ಹೀಗೆ ಮೇಲ್ಚಾಗದಲ್ಲಿ ಯುದ್ಧ ಸಾಮಗ್ರಿಗಳು ಸಿಗುವುದಲ್ಲದೆ ನೆಲದಲ್ಲಿಯೂ ಕೂಡ ಸಿಗುತ್ತಿರುವುದರಿಂದ ಸಂಧಿ ನಿಬಂಧನೆಯಾದ್ದಕ್ಕೆ ತಯಾರಾಗಬಹುದೆಂದು ಅಮೇರಿಕನ್ನರಿಗೆ ಬಲವಾದ ಸಂಶಯ ಬರುತ್ತಿದೆ (ಸಂ)

ಬ್ರಿಟಿಷರು ಭಾರತದಿಂದ ಹೊರಡಬೇಕು

1946 ನೇ ಇಸವಿ ಜುಲೈ 4 ಕ್ಕೆ ಬ್ರಿಟಿಷರು ಭಾರತದಿಂದ ತೊಲಗಬೇಕು. ಅಂದು ಬ್ರಿಟಿಷರು ತಮ್ಮ ಎಲ್ಲಾ ಅಧಿಕಾರಗಳನ್ನೂ ಭಾರತೀಯರಿಗೆ ಬಿಟ್ಟು ಕೊಡಬೇಕು. ಇಲ್ಲವಾದರೆ ಪಾರ್ಲಿನಿಧಿಕ ತಾತ್ಕಾಲಿಕ ಸರಕಾರಕ್ಕೆ ಅಧಿಕಾರ ಬಿಟ್ಟುಕೊಡಬೇಕು. ಏನಾದರೂ ಜುಲೈ 4 ಕ್ಕೆ ತಾವು ಭಾರತದಿಂದ ಹೊರಟು ಹೋಗುವುದಾಗಿ ಬ್ರಿಟಿಷರು ಆಶ್ವಾಸನ ಕೊಡಬೇಕು — ಎಂದು ಅಮೆರಿಕಾದಲ್ಲಿಯ ಇಂಡಿಯಾ ಲೀಗಿನ ಅಧ್ಯಕ್ಷರಾದ ಶ್ರೀ ಜೆ. ಜಿ. ಸಿಂಗರು ' ವಸಾಹತಿ ಸಾಮ್ರಾಜ್ಯ ಅಳಿಯಬೇಕೆ ? ' ಎಂಬ ವಿಷಯದ ಬಗ್ಗೆ ಚರ್ಚೆ ನಡೆದಾಗ ನ್ಯೂಯಾರ್ಕಿನಲ್ಲಿ ತಾ || 21 ರಲ್ಲಿ ತಿಳಿಸಿದರು (ಸಂ ಗೆ)

ವಾರ್ತಾತರಂಗ

ಲಂಡನ್, ಡಿ 24 — ಲಂಡನ್ನಿನಲ್ಲಿ ಸ್ವರಾಜ್ಯ ಭವನದವರು ಭಾರತ ರಾಷ್ಟ್ರೀಯ ಮಹಾಸಭೆಯ ವಜ್ರೋತ್ಸವವನ್ನು ಭಾನುವಾರ ವೈಭವದಿಂದ ನೆರವೇರಿಸುವರು.

ನವದೆಹಲಿ, ಡಿ 24 — ನುಲಿಯಾದ ಐ. ಎನ್. ಎ ಖೈದಿಗಳ ರಕ್ಷಣಾರ್ಥವಾಗಿ ಐದು ಜನ ವಕೀಲರನ್ನು ಇಲ್ಲಿಂದ ಭಾರತ ಸರ್ಕಾರ ಕಳುಹಿಸಿತ್ತು.

ಕಲ್ಕತ್ತಾ, ಡಿ 24 — ಗಾಂಧೀಜಿ ಮೈಸೂರಾಯರನ್ನು ಜನವರಿ 4 ರಲ್ಲಿ ಭೇಟಿ ಮಾಡುವರು.

ಮದರಾಸು, ಡಿ 22 — ತಿರುವಳ್ಳಿಕೇಣಿಯಲ್ಲಿ ನಾಳೆ ಜಿನ್ನಾರವರ ವರ್ಧಂತ್ಯುತ್ಸವದ ಪ್ರಯುಕ್ತ ಮೆರವಣಿಗೆ ನಡೆಸಲು ಮುಸ್ಲಿಂ ಲೀಗಿಗೆ ಪೋಲೀಸು ಕಮಿಷನರು ಅನುಮತಿಕೊಡಲಿಲ್ಲ.

ಬೊಂಬಾಯಿ, ಡಿ 25 — ಬಿ ಬಿ ಸಿ ಐ ರೈಲ್ವೆಯ ನೇಮಿಚ್ ಆಜ್ಮೀರ್ ಸೆಕ್ಷನ್ನಿನಲ್ಲಿನ ಪಂಭಾವರ ಮತ್ತು ಸಿಂಬಹೇರ ಮಧ್ಯೆ ಒಂದು ರೈಲ್ವೆ ಸೇತುವೆ ಹತ್ತಿರ ಒಂದು ಗುಡ್ಸ್ ರೈಲಿಗೆ ಅಪಘಾತವುಂಟಾಗಿ ಗಾರ್ಡ್ ಸೇರಿ ನಾಲ್ಕು ಮಂದಿ ಹತರಾದರು. ಕೆಲವು ವ್ಯಾಗನ್ನುಗಳು ನೀರಿಗೆ ಬಿದ್ದಿವೆ.

ಲಂಡನ್ ಡಿ 24— ಅಮೇರಿಕಾದಲ್ಲಿಯ ಬೆಳ್ಳಿಯನ್ನು ಹೊರಕ್ಕೆ ರಫ್ತು ಮಾಡಲು ಅನುಕೂಲಿಸುವ ಮಸೂದೆಯು ಮಂಜೂರಾಯಿತು.

ಜೆರೂಸೆಲಂ ಡಿ 24— ಬೆಲ್‌ಗೇರಿಯಾದಿಂದ 140 ಮಂದಿ ಯಹೂದ್ಯರು ಬಂದಿರುವರು.

ಲಂಡನ್ ಡಿ 24— 390 ಟನ್ ಬೆಳ್ಳಿಯು ಅಮೇರಿಕಾದಿಂದ ಗುಟ್ಟಾಗಿ ಭಾರಿ ಕಾವಲಿನೊಡನೆ ತರಲಾಗಿದೆ. ಇದನ್ನು ಭಾರತದಲ್ಲಿ ಬಿಕರಿ ಮಾಡಲಾಗುವುದೆಂದು ಹೇಳಲಾಗಿದೆ,

ಶಾಂತಿಸಮ್ಮೇಳನದ ಒಂದನೇ ಅಂಕ ಮುಗಿದನಂತರ ಭಾರತವೂ ಅದರಲ್ಲಿ ಭಾಗವಹಿಸುವುದೆಂದು ಈಗ ತಿಳಿದುಬಂದಿದೆ. ಸಮ್ಮೇಳನವು ಒಟ್ಟು ನಾಲು ಅಂಕಗಳುಳ್ಳದ್ದಾಗಿರುವುದೆಂದು ಹೇಳಲಾಗಿದೆ.

ಕರಾಚಿ ಡಿ 28— ಹೈದರಾಬಾದಿನಲ್ಲಿ ನಡೆಯುವ ಸ್ತ್ರೀ ಸಮ್ಮೇಳನಕ್ಕೆ ಭಾರತ ಮಂತ್ರಿ ಲಾರ್ಡ್ ಪೆಥಿಕ್ ಲಾರೆನ್ಸರ ಪತ್ನಿಯವರು ಕೊಟ್ಟರುವ ಸಂದೇಶದಲ್ಲಿ, ಗಾಂಧೀಜಿಯವರನ್ನು ಪ್ರಶಂಸಿರುವರಲ್ಲದೆ. ಅವರು ಸಾರುತ್ತಿರುವ ಅಹಿಂಸಾ ತತ್ವವೊಂದೇ ಪ್ರಪಂಚದ ಉದ್ಧಾರಕ್ಕೆ ಮಾರ್ಗವೆಂದು ತಿಳಿಸಿರುವರು.

ಮಿ || ಚರ್ಚಿಲ್ಲರು ತಮ್ಮ ಅಮೇರಿಕಾದ ಪ್ರವಾಸಕ್ಕೆ ಮುಂಚೆಯೋ ನಂತರವೋ ಜುಗೋಸ್ಲೊವೇಕಿಯಾಕ್ಕೆ ಭೆಂಟಿಕೊಡುವರೆಂದು ಹೇಳಲಾಗಿದೆ.

ಬಾಂಬೇ ಟಾಕೀಸಿನವರ ' ಕಿಸ್ಮತ್ ' ಚಿತ್ರವು ಕಲ್ಕತ್ತಾದಲ್ಲಿ 117 ನೇ ವಾರನಡೆಯುತ್ತಿದೆ.



ಕಲ್ಲಿಜ್ಜಲಿಂದ ಬಿಣ್ಣಿ

ಬರ್ಲಿನ್ ಡಿ 22 — ಯುದ್ಧಕಾಲದಲ್ಲಿ ಜರ್ಮನ್ ಸೈನ್ಯವು ಉಪಯೋಗಿಸುತ್ತಿದ್ದ ಕಲ್ಲಿಜ್ಜಲಿಂದ ತಯಾರಾಗುವ ಬಿಣ್ಣೆಯನ್ನು ಕಂಡುಹಿಡಿದ ಅರ್ಧ-ಯಹೂದ್ಯನು 5 ಲಕ್ಷ ಪೌಂಡು ವ್ಯಯದಿಂದ ಕಾರ್ಖಾನೆ ಸ್ಥಾಪಿಸಬೇಕೆಂದಿರುವನು. ಇದಾದರೆ ಅವನು ವರ್ಷಕ್ಕೆ 35 ಸಾವಿರ ಟನ್ ಕೊಬ್ಬನ್ನು ತಯಾರಿಸಿ, ಪೌಂಡಿಗೆ 6 ಪೆನ್ಸಿನಂತೆ ದೊರಯುವಂತೆ ಮಾಡುವನೆಂದು ಹೇಳುತ್ತಾನೆ.

.....

ರೂರ್ ಪ್ರಾಂತ್ಯದ ನಿಯಂತ್ರಣ

ಲಂಡನ್ ಡಿ 20— ಜರ್ಮನಿಯಲ್ಲಿನ ರೋರ್ ಕಲ್ಲಿದ್ದಲು ಗಣಿಯನ್ನು ತಮ್ಮ ಅಧಿಕಾರಿಗಳ ನಿಯಂತ್ರಣಕ್ಕೆ ಒಳಪಡಿಸಬೇಕೆಂಬ ಬ್ರಿಟಿಷ್ ಸಂಕಾರದ ಇಚ್ಛೆಯನ್ನು ಅದು ಬೇಗನೆ ಪ್ರಕಟಿಸಲಿರುವುದು. ಈ ಕಲ್ಲಿದ್ದಲು ಗಣಿಗಳಿಶುವ ಪ್ರದೇಶಗಳು ಈಗ ಬ್ರಿಟಿಷ್ ಸೈನ್ಯಾಧಿಕಾರಿಗಳಿಂದ ಆಳಲ್ಪಡುವ ಪ್ರದೇಶಕ್ಕೆ ಸೇರಿರುವ ಕಾರಣ ಬ್ರಿಟಿಷ್, ಫ್ರೆಂಚ್, ರಷ್ಯೆ ಮತ್ತು ಅಮೇರಿಕ ಪ್ರತಿನಿಧಿಗಳುಳ್ಳ ಒಂದು ಅಂತರಾಷ್ಟ್ರೀಯ ಸಂಸ್ಥೆಯು ಏರ್ಪಡುವ ತನಕ ಈ ಗನಿಯು ಬ್ರಿಟಿಷರ ಅಧಿಕಾರಕ್ಕೆ ಒಳಪಟ್ಟಿರಬೇಕಾಗುವುದೆಂದು ತಿಳಿಯಬರುತ್ತದೆ

.....

ಹಳೆಯ ನಾಣ್ಯ

ಕೊಚ್ಚಿ ದೇಶದಲ್ಲಿ ಎವ ವಾದಾ ಕಾನ್ಟೆರಿಯು ಸವಿಾಪದಲ್ಲಿ ರೋಮನ್ನರು ಸಾಮ್ರಾಜ್ಯದ ಒಂಗಾರ ಮತ್ತು ಬೆಳ್ಳಿ ನಾಣ್ಯಗಳು ಮೊನ್ನೆ ಸಿಕ್ಕಿನೆ. ಒಂಗಾರದ ನಾಣ್ಯಗಳು ನೀರೊ, ಒಗುಸ್ತಸ್ ಮತ್ತು ತಿಬೆರಿಯಸ್ ಚಕ್ರವರ್ತಿಯದು ಬೆಳ್ಳಿಯ ನಾಣ್ಯಗಳು ಇತರ ರೋಮ್ ಮೊದಲಿನ ಚಕ್ರವರ್ತಿಯೆದು ಕೊಚ್ಚಿಗೂ ರೋಮ್ ಸಾಮ್ರಾಜ್ಯಕ್ಕೂ ಎರಡು ಸಾವಿರ ವರ್ಷಗಳ ಹಿಂದೆ ವ್ಯಾಪಾರ ಸಂಬಂಧವಿದ್ದಿತೆಂದು ಇದರಿಂದ ತಿಳಿಯುತ್ತದೆ.

.....

ನಾಜೀ ಚಳುವಳಿ

ಲಂಡನ್ ಡಿ 23— ದೊಡ್ಡ ದೊಡ್ಡ ಜರ್ಮನ್ ಪಟ್ಟಣಗಳಲ್ಲಿ ನಾಜೀ ಚಳುವಳಿ ಕಾಣಬರುತ್ತಿರುವದೆಂದೂ, ಹಿಟ್ಲರು ಬದುಕಿರುವನೆಂಬ ನಂಬಿಕೆ ಹೆಚ್ಚುತ್ತಿದೆಯೆಂದೂ ಹೇಳಲಾಗಿದೆ.

ವಿವಿಧ ವರ್ತಮಾನ

—

ಉತ್ತರ ಆಸ್ಟ್ರೇಲಿಯಾದಿಂದ ಕಾಡು ಎಮ್ಮೆಗಳು ತರಲ್ಪಟ್ಟು ಸಾಧು ಮಾಡಲ್ಪಟ್ಟು ಚೈನಾದವರಿಗೆ ಜಪಾನಿಯರು ಅವರ ಎಮ್ಮೆಗಳನ್ನು ಕೊಂದುದರ ಒದಲು ಉಪಯೋಗಿಸಿಕೊಳ್ಳಲು ಕೊಡಲಾಗುವುದೆಂದು ಮೆಲ್ಬೋರ್ನ್ ರೇಡಿಯೋ ತಿಳಿಸುತ್ತದೆ.

ಂ ಂ

ಕರಾಚಿ ಡಿ 23— ನವೆಂಬರ್ ತಿಂಗಳಲ್ಲಾದ ಭೂಕಂಪದ ಪರಿಣಾಮದ ಅಲೆಯು ಹೊಡೆತದಿಂದ 163 ಮಂದಿ ಗತ ಪ್ರಾಣರಾದರೆಂದೂ, 800 ಮಂದಿ ಮನೆ ಮಠಗಳಿಲ್ಲದೆ ನಿರ್ಾಶ್ರಿತರಾದರೆಂದೂ ರೂ. 214000 ಅಸ್ತಿಪಾಸ್ತಿ ನಷ್ಟವಾಯಿತೆಂದೂ ಅಧಿಕಾರಯುತ ಪ್ರಕಟಣೆ ತಿಳಿಸುತ್ತದೆ.

ಂ ಂ

ಪಂ॥ ನೆಹರು ದರ್ಶನಕ್ಕಾಗಿ ಅತ್ಯುತ್ಸಾಹಿಗಳು ಗಂಗಾನದಿಯನ್ನು ದಾಟುತ್ತಿದ್ದಾಗ ಅಲ್ಲಿ ಜನಸಂದಣಿ ಗೊಂದಲದಲ್ಲಿ ಈರ್ವರು ನದಿಯಲ್ಲಿ ಬಿದ್ದು ಜಲ ಸಮಾಧಿಯಾದರು. (ಪಾಟ್ನ ಬಾತ್ಮಿ)

ಂ ಂ

ಅರೇಬಿಯಾದ ರಾಜ ಇಬ್ನ್ ಸೈದ್ ಮುಂದಿ ರಾಜ ಇಬ್ನ್ ಸೌದ್ ಮುಂದಿನ ತಿಂಗಳಲ್ಲಿ ಈಜಿಪ್ಟಿಗೆ ಭೇಟಿ ಕೊಡುವಾಗ ಅವರ ಜೀವಿತಕ್ಕೆ ಹೆಂಡತಿಯಂಲ್ಲಿ ಹುಟ್ಟಿರುವ 60 ಮಂದಿ ಮಕ್ಕಳ ಪೈಕಿ 17 ಮಂದಿ ಅವರ ಜೊತೆಯಲ್ಲಿ ಬರುವರಾಗಿರುವರು. ಇದು ಇಲ್ಲಿ ನಡೆಸುವ ಔತಣದ ಏರ್ಪಾಡಿನ ಅಧಿಕಾರಿಗೆ ತಲೆನೋವನ್ನುಂಟುಮಾಡಿದೆ. ಇವುನ್ನು ಯಾವ ಸ್ಥಾನಗಳಲ್ಲಿ ಕೂರಿಸಬೇಕೆಂದು.

ಂ ಂ

ಭಾರತ ರಾಷ್ಟ್ರೀಯ ಸೇನೆಯ ಜಾನ್ಸಿ ದಳದ ದಂಪತಿ ಕ್ಯಾ॥ ಲಕ್ಷ್ಮಿ ವಿಚಾರಣೆಯಿಲ್ಲವೆಂದು ಡಾನ್ ಪತ್ರಿಕಾ ಬಾತ್ಮಿದಾರ ವದಿ ಮಾಡಿದ್ದಾನೆ.

ಂ ಂ

ಮೊನ್ನೆಯ ದಿನ ಡೈಮಂಡ್ ಹಾರ್ಬರಿನಲ್ಲಿ ಗಾಂಧೀಜಿ ಭಾಷಣ ಮಾಡಿದರು ಸಾರ್ವಜನಿಕ ನೂಲಿನ ಕಾರ್ಯದಲ್ಲಿ ಏಳ್ನೂರೈವತ್ತು ಮಂದಿ ಭಾಗವಹಿಸಿದ್ದರು. 2525೦ ರೂ ನಿಧಿ ಕೊಡಲಾಯಿತು.

ಇಂಗ್ಲೆಂಡು ಇಂಡಿಯಾಕ್ಕೆ ಕೊಡಬೇಕಾಗಿರುವ ಸಾಲ

—

ಇಂಗ್ಲೆಂಡು 2-3 ತಿಂಗಳವರೆಗೂ ಅಮೇರಿಕಾದ ಸಂಗಡ 'ಸಂಧಾನವಿಟ್ಟು ಬೆದರಿಕೆ ಹಾಕಿ ಕಟ್ಟಕಡೆಗೆ 3750 ಮಿಲಿಯ ಪೌಂಡುಗಳ ಸಾಲವನ್ನು ಪಡೆದು ಅಮೇರಿಕಾಕ್ಕೆ ಸ್ವಲ್ಪಮಟ್ಟಿಗೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವ್ಯಾಪಾರದ ಸಲವತ್ತುಗಳನ್ನು ಕೊಡಲು ಒಪ್ಪಿಕೊಂಡಿತು. ಈಗ ಪಡೆದುಕೊಂಡಿರುವ ಸಾಲದಿಂದ ಇಂಡಿಯಾ, ಈಜಿಪ್ಟ್ ಮತ್ತು ಇರಾಕ್ ಮುಂತಾದ ಸ್ಟರ್ಲಿಂಗ್ ಬ್ಲಾಕಿನ ದೇಶಗಳ ಸಾಲವನ್ನು ತೀರಿಸಬೇಕಾಗಿತ್ತು. ಆದರೆ ಕೊಟ್ಟಿರುವ ಸಾಲ ತಿರುಗಿ ಕೊಟ್ಟರೆ ತನಗೇನು ಉಳಿಯಿತೆಂಬುವ ಧ್ಯೇಯವನ್ನು ಇಂಗ್ಲೆಂಡು ಈಗ ಸ್ವೀಕರಿಸಿದೆ. ಇಂಗ್ಲೆಂಡು ಈ ದೇಶಗಳಲ್ಲಿ ಒಂದೊಂದರೆ ಸಂಗಡ ಒಪ್ಪಂದ ಮಾಡಿಕೊಳ್ಳಲಿರುವುದಂತೆ. ಈ ಸಾಲವು ಯುದ್ಧ ಕಾಲದಲ್ಲಿ ಮಾಡಲ್ಪಟ್ಟ ಸಾಲವಂತೆ. ಯುದ್ಧದಲ್ಲಿ ಈ ದೇಶಗಳನ್ನೆಲ್ಲ ರಕ್ಷಣೆ ಮಾಡಿತಂತೆ. ಅದುದರಿಂದ ಈ ದೇಶಗಳು ಇಂಗ್ಲೆಂಡಿಗೆ ಕೃತಜ್ಞತೆ ತೋರಿಸಲಿಕ್ಕೆ ಈ ಸಾಲವನ್ನು ಕಡಿಮೆ ಮಾಡಬೇಕಂತೆ. ಎಷ್ಟು ಎಂಬುದು ಸಂಧಾನದಲ್ಲಿ ತಿಳಿಯಬರುವುದು. ಮಿಕ್ಕ ಸಾಲವನ್ನು ಇಂತಿಷ್ಟು ವರ್ಷಗಳಲ್ಲಿ (ಎಷ್ಟು ವರ್ಷಗಳು ಎಂಬುದು ತಿಳಿದಿಲ್ಲ. ಮಾಲನ್ನು ಕೊಂಡು ಅಗಲಿ ಅಥವಾ ಅತಿ ಮುಖ್ಯ ಮಾಲನ್ನು ಅಮೇರಿಕಾದಿಂದ ಕೊಳ್ಳುವುದಾದರೆ ಅದಕ್ಕೆ ಹಿಂಡಿ ಕೊಡಲಾಗುವುದಂತೆ. ಆದರೆ ಹಿಂದೂ ದೇಶವು ಬಡ ದೇಶವು. ಇಲ್ಲಿ ನೂರಕ್ಕೆ ೮೯ ಜನರು ಎರಡೊಪ್ಪತ್ತಿನ ಊಟವನ್ನು ಕಾಣುವಂತಿಲ್ಲ. ಈ 1400 ಕೋಟಿ ರೂಪಾಯಿಗಳನ್ನು 5 ಲಕ್ಷ ಜನರನ್ನು ಉಪವಾಸದಿಂದ ಹತಮಾಡಿ ಇಂಗ್ಲೆಂಡಿಗೆ ಕೊಡಲ್ಪಟ್ಟಿದೆ. ಬ್ರಿಟಿಷ್ ಸಾಮ್ರಾಜ್ಯದ ಸೈನಿಕರು ಯುದ್ಧದಲ್ಲಿ ಹತರಾದ ಸಂಖ್ಯೆಗಿಂತಲೂ 3 ರಷ್ಟು ಹೆಚ್ಚು ಮಂದಿ ಇಂಗ್ಲೆಂಡಿಗೆ ಸಾನುಗ್ರಿಗಳನ್ನೊದಗಿಸಲು ಪ್ರಾಣ ತೆತ್ತಿರುವರು. ಅಲ್ಲದೆ ಇಂಡಿಯಾವು ಪ್ರತಿವರ್ಷ ಹೋಂ ಚಾರ್ಜ್, ನಿವೃತ್ತ ಅಧಿಕಾರಿಗಳ ಪೆನ್ಷನ್ ಇಂಡಿಯಾದಲ್ಲಿ ಇಂಗ್ಲೆಂಡು ಹಾಕಿರುವ ಬಂಡವಾಳಕ್ಕೆ ಬಡ್ಡಿ ಮತ್ತು ಲಾಭದ ರೂಪವಾಗಿ ಮಹಮ್ಮದ್ ಘಜನಿಯು 17 ಸಾರಿ ಕೊಳ್ಳೇಹೊಡೆದುಕೊಂಡಷ್ಟನ್ನು ಅಥವಾ ಅದಕ್ಕಿಂತಲೂ ಹೆಚ್ಚಿನ ಹಣವನ್ನು ಇಂಡಿಯಾವು ಇಂಗ್ಲೆಂಡಿಗೆ ತೆರಬೇಕಾಗಿರುವುದು. ಇದರಲ್ಲಿ ಒಂದು ಪೈ ಕೂಡ ಕಡಮೆಯಾಗುವಂತಿಲ್ಲ. ಆದರೂ ರಕ್ತ ಸುರಿಸಿ ಕೊಟ್ಟ ಸಾಲವನ್ನು ಇಂಡಿಯಾವು ಈಗ ಕಡಮೆ ಮಾಡಿ ಮಿಕ್ಕದ್ದನ್ನು ಎಷ್ಟೋ ವರ್ಷಗಳಲ್ಲಿ ತೀರಿಸಿಕೊಳ್ಳಬೇಕಂತೆ. ಅದು ಎಂದಿಗೂ ಆಗದ ಮಾತು- ಇಂಡಿಯಾವು ತನಗೆ ಬರಬೇಕಾದ ಸಾಲದಲ್ಲಿ ಒಂದು ಗೈಯನ್ನು ಕೂಡ ಕಡಮೆ ಮಾಡಲು ಇಷ್ಟ ಪಡುವುದಿಲ್ಲ. ಇಂಗ್ಲೆಂಡು ಬೇಕಾದರೆ ಸಾಮ್ರಾಜ್ಯ ಒಲದಿಂದ ಸಾಲವನ್ನು ಮುಳುಗಿಸಲಿ, ನಂತರ ಅದರ ಫಲವನ್ನು ಉಣ್ಣಲಿ. (ನ. ಸಂ.)

ಸಿಂಗಪುರದಲ್ಲಿನ ಮೂರು ಸಾವಿರ ಮಂದಿ ಭಾರತೀಯರಲ್ಲಿ ಎರಡು ಸಾವಿರ ಮಂದಿ ಆಜಾದ್ ಹಿಂದ್ ಫೌಜಿಗೆ ಸೇರಿದ್ದರು. ಸ್ತ್ರೀಯರುಗಳು ಫೌಜಿನ ನಿಧಿಗೆ ತಮ್ಮ ಆಭರಣಗಳನ್ನೇ ಕಳಿದು ಕೊಡತ್ತಿದ್ದರೆಂದು ಹೇಳಲಾಗಿದೆ

CINEMA STARS

Pictorial Calender for 1946. 8 different kinds. Nicely posed. U. S. A. printed. Rs. 2-8-0 with postage.

T, I T, Post Box 21, Dacca3

ಸ ತ್ಯ ವಾ ದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ,
ಚಾಮರಾಜಪುರಂ, ಮೈಸೂರು

COSMETICS & TOILET PREPARATION

An English book containing more than 80 modern, practical formulas and there manufacturing process. Rs. 2-8-0. Postage As. 0-8-0.

R. N. & Co, Malakartola, Dacca 3.

TRUE ART STUDIES

Beautiful Women. Photos from life. Actual photos of living models in different nations in daring position. Cabinet size Rs 15 per doz. Post card size Rs 12 per doz.

FRENCH ART SPECIAL

Every man likes to see. Life-like charmin posed. Love scenes. 200 different post card size. Rs 12 per doz. When ordering please state your age and occupation.

T.I.T. Post Box 21 Dacca

At Ranjit

ಪೃಥ್ವಿರಾಜ್, ಪದ್ಮಿನಿ, ಮೋನಿಕಾ, ದೇಶಾಯಿ, ಮುಂತಾದವರು ನಟಿಸಿರುವ

— ಗೌರಿ —

(ಹಿಂದಿ)

27-12-45 ರಿಂದ ಪ್ರತಿದಿನ 3 ಆಟ 3-30, 6-30 ಮತ್ತು 9-45 ಕ್ಕೆ

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 57-8-0
ಚಿನ್ನ ತೊಲ 1 ಕ್ಕೆ	82-0-0
ಬೆಳ್ಳಿ	1-6-0

ಹಸರ್ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸರ್
ಶಿವರಾಂಪೇಟೆ ಮೈಸೂರು.

ಸೂ ಚ ನೆ

ನೂತನ ವರ್ಷಾರಂಭದ ಪ್ರಯುಕ್ತ ನಾಳೆಯ ದಿನಸ ನಮ್ಮ ಪತ್ರಿಕೆಗೆ ರಜಾ.
ಮ್ಯಾ. ಸತ್ಯವಾದಿ.

HAIR BEAUTY

Superfine Hair Toiletry and Hair stimulant. Useful in Direare of the hair & scalp. Rs. 1-8-0 per 4 czs phial. Wanted Agents & Stockists everywhere.

R. N. & Co.. Malakartola Dacca 3

AT Opera— 2 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ

ಪಾತ್ರವಹಿಸಿರುವ

ಅಶೋಕ ಕುಮಾರ (ತಮಿಳು)

Morning Shows from 28—12—45

To be or not to be

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

L. N. Press

Sriramp st MYSORE

For Good Printing

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಶಕ್ತಿ ಸುಧಾ

ಬೆಲೆ ಡಬ್ಬಿಗೆ ಒಂದು ರೂಪಾಯಿ

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು